ಕರ್ನಾಟಕ ಸರ್ಕಾರ

**GOVERNMENT OF KARNATAKA**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ರವರ ಕಚೇರಿ
*Office of the*
*Principal Chief Conservator of Forests*
*(Head of Forest Force)*

ಅರಣ್ಯ ಭವನ, 18 ನೇ ಅಡ್ಡ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು-560003
*Aranya Bhavan, 18th Cross*
*Malleshwaram, Bengaluru- 03*
*Telephone : 080 2334 6472*
*Email : apccffc@gmail.com*

*Old File No.A5(2).GFL.CR-42/2016-17* **E 134003**
*E-office File No. KFD/HOFF/A5-2(GFL)/170/2019-FC* *Date 17-06-2020*

ಅಡಕ:

ಇವರಿಗೆ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ
ಬಹುಮಹಡಿಗಳ ಕಟ್ಟಡ, ಬೆಂಗಳೂರು

ಮಾನ್ಯರೇ,

ವಿಷಯ: *Diversion of 0.80 hectare of forest land in Sy.No.125/P of Sampaje Village in Sullia Hobli and Taluk, Dakshina Kannada District (Sampaje Reserved Forest of Mangaluru Forest Division) for construction of 33/11KV Substation (1.5 MVA) in favour of the Executive Engineer, Mangaluru Electricity Supply Company (MESCOM), O & M Division, Puttur, Dakshina Kannada District*

**Proposal No. FP/KA/TRANS/24339/2017**

ಉಲ್ಲೇಖ:
1. ಈ ಕಛೇರಿಯ ಯಥಾ ಸಂಖ್ಯೆ ಪತ್ರ ದಿನಾಂಕ 11-12-2019 *[Stage-I proposal]* ಮತ್ತು 07-03-2020 *[communication of GOK EDS Query]*
2. ರಾಜ್ಯ ಸರ್ಕಾರದ ಪತ್ರ ಸಂಖ್ಯೆ ಅಪಜೀ 06 ಎಫ್‌ಎಲ್‌ಎಲ್ 2020 (ಇ) ದಿನಾಂಕ 07-02-2020 *[EDS Query dated 13-02-2020]*
3. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ವೃತ್ತ ಇವರ ಪತ್ರ ಸಂಖ್ಯೆ ಎ 3/ಸಿಆರ್-11/2005-06 ದಿನಾಂಕ 29-05-2020 *[EDS Query ಗೆ ಉತ್ತರ]*

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ದಿನಾಂಕ 11-12-2019 ರ ಪತ್ರದಲ್ಲಿ ಅರಣ್ಯ (ಸಂರಕ್ಷಣೆ) ಕಾಯ್ದೆ 1980 ರಡಿಯಲ್ಲಿ ಈ ಕಛೇರಿಯಿಂದ ಸಲ್ಲಿಸಿರುವ ಪ್ರಸ್ತಾವನೆಗೆ ರಾಜ್ಯ ಸರ್ಕಾರವು ಉಲ್ಲೇಖ (2)ರ ಮೂಲಕ ಕೆಲವೊಂದು ಅಂಶಗಳಿಗೆ ಹೆಚ್ಚುವರಿ ಮಾಹಿತಿಯನ್ನು ಒದಗಿಸುವಂತೆ ಕೋರಿರುತ್ತದೆ. ಸದರಿ ಮಾಹಿತಿಯನ್ನು ಒದಗಿಸುವಂತೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ವೃತ್ತ ಇವರಿಗೆ ಈ ಕಛೇರಿಯ ಉಲ್ಲೇಖ (1) ದಿನಾಂಕ 07-03-2020 ರ ಪತ್ರದ ಮೂಲಕ ಸೂಚಿಸಲಾಗಿತ್ತು. ಅದರಂತೆ, ಮುಖ್ಯ ಅರಣ್ಯ

ಸಂರಕ್ಷಣಾಧಿಕಾರಿ, ಮಂಗಳೂರು ವೃತ್ತ ಇವರು ಉಲ್ಲೇಖ (3)ರ ಪತ್ರದ ಮೂಲಕ ಮಾಹಿತಿಯನ್ನು ಒದಗಿಸಿದ್ದು, ವಿವರವು ಈ ಕೆಳಗಿನಂತಿರುತ್ತದೆ.

| ಕ್ರ.ಸಂ | *EDS Query* | *EDS Query* ಗೆ ಉತ್ತರ |
|---|---|---|
| 1 | ಸದರಿ ಪ್ರಸ್ತಾವನೆಯಲ್ಲಿ ಉಪಯೋಗಿ ಸಂಸ್ಥೆಗೆ 0.80 ಹೆ. ಜಮೀನಿನ ಅಗತ್ಯತೆ ಬಗ್ಗೆ ಸಮರ್ಥನೆಯನ್ನು *(Justification)* ನೀಡುವುದು. | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ 33/11 ಕೆ.ವಿ ಸುಳ್ಯ ವಿದ್ಯುತ್ ಉಪ ಕೇಂದ್ರದಿಂದ ತೋಡಿಕಾನ, ಅರಂತೋಡು, ಸಂಪಾಜೆ, ಆಲೆಟ್ಟಿ, ಮರ್ಕಂಜ ಹಾಗೂ ಮಡಿಕೇರಿ ಗಡಿ ಪ್ರದೇಶಗಳಾದ ಚೆಂಬು, ಕೊಯನಾಡು ಮತ್ತು ಇನ್ನಿತರ ಗ್ರಾಮಗಳಿಗೆ ವಿದ್ಯುತ್ ಪೂರೈಕೆ ಮಾಡುತ್ತಿದ್ದು, ಸದರಿ ಉಪಕೇಂದ್ರವು ಮೇಲೆ ಹೇಳಲಾದ ಗ್ರಾಮಗಳಿಂದ ಸುಮಾರು 30-40 ಕಿ.ಮೀ ದೂರದಲ್ಲಿರುತ್ತದೆ. ಅಲ್ಲಿಂದ ವಿದ್ಯುತ್ ಜಾಲ ನಿರ್ಮಿಸಿ ವಿದ್ಯುತ್ ಸರಬರಾಜು ಮಾಡುತ್ತಿರುವುದರಿಂದ ಲೋವೋಲ್ಟೇಜ್ ನಂತಹ ಸಮಸ್ಯೆಗಳಾಗಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿರುವುದು ಸ್ಥಳೀಯ ಗ್ರಾಮಸ್ಥರಿಂದ ತಿಳಿದುಬಂದಿರುತ್ತದೆ. ಈ ಸಮಸ್ಯೆಯನ್ನು ಸರಿದೂಗಿಸುವ ಸಲುವಾಗಿ ಹಾಗೂ ಸಾರ್ವಜನಿಕ ಉದ್ದೇಶಕ್ಕಾಗಿ ಸುಳ್ಯದಿಂದ ಸುಮಾರು 14 ಕಿ.ಮೀ ದೂರದಲ್ಲಿರುವ ರಾಜಾರಾಂಪುರ ಎಂಬ ಪ್ರದೇಶದಲ್ಲಿ ಮತ್ತೊಂದು 33/11 ಕೆ.ವಿ. ವಿದ್ಯುತ್ ಉಪಕೇಂದ್ರ ನಿರ್ಮಾಣ ಮಾಡಿ ಸ್ಥಳೀಯ ಗ್ರಾಮಗಳಿಗೆ 11 ಕೆ.ವಿ. ಫೀಡರ್ ಗಳ ಮೂಲಕ ವಿದ್ಯುತ್ ಸರಬರಾಜು ಮಾಡಲು ಪ್ರಸ್ತಾವಿತ ಸ್ಥಳದ ಅಗತ್ಯತೆಯು ಕಂಡುಬಂದಿರುತ್ತದೆ ಎಂದು ಉಪಯೋಗಿ ಸಂಸ್ಥೆಯವರು ತಮ್ಮ ಪತ್ರ ದಿನಾಂಕ 18-03-2020 ರ ಮೂಲಕ ವರದಿ ಸಲ್ಲಿಸಿರುತ್ತಾರೆ. |
| 2 | ಕೋರಿಕೆಯಿಡಲಾಗಿರುವ ಅರಣ್ಯ ಜಮೀನಿನ ಬದಲಿಗೆ ಕನಿಷ್ಠ 03 ಪರ್ಯಾಯ ಜಮೀನುಗಳ ಲಭ್ಯತೆ ಬಗ್ಗೆ ಪರಿಶೀಲನೆ ನಡೆಸಿ, ಅವುಗಳ *feasibility* ಬಗ್ಗೆ ಉಪಯೋಗಿ ಸಂಸ್ಥೆಯ ಸಮರ್ಥನೆಯನ್ನು *(Justification)* ಪಡೆದು ಸಲ್ಲಿಸುವುದು | ವಿದ್ಯುತ್ ಉಪಕೇಂದ್ರದ ಸ್ಥಾಪನೆಗೆ ಸೂಚಿಸಲಾದ 03 ಪರ್ಯಾಯ ಸ್ಥಳಗಳನ್ನು ಪರಿಶೀಲನೆ ನಡೆಸಲಾಗಿ ಪ್ರಥಮ ಜಮೀನು ಸಂಪಾಜೆ ಗ್ರಾಮದ ಕಲ್ಲುಗುಂಡಿ, 2 ನೇ ಜಮೀನು ಸಂಪಾಜೆ ಕಡೆಪಾಲಬಂಟೋಡಿ ಹಾಗೂ 3 ನೇ ಜಮೀನು ಸಂಪಾಜೆ ಗ್ರಾಮದ ನೆಲ್ಲಿಕುಮೇರಿ ಎಂಬಲ್ಲಿ ಗುರುತಿಸಿದ ಪ್ರದೇಶಗಳಾಗಿದ್ದು, ಮೇಲೆ ಹೇಳಲಾದ ಪ್ರದೇಶಗಳಲ್ಲಿ ವಿದ್ಯುತ್ ಉಪಕೇಂದ್ರ ಸ್ಥಾಪಿಸಬೇಕಾದಲ್ಲಿ 5 ರಿಂದ 6 ಕಿ.ಮೀ. ಹೊಸದಾಗಿ (Heavy) ವಿದ್ಯುತ್ ಜಾಲ ನಿರ್ಮಿಸುತ್ತಿರುವ ಅಗತ್ಯವಿರುತ್ತದೆ. ಅಲ್ಲದೆ ವಿದ್ಯುತ್ ತಂತಿ ಎಳೆಯುವ ಪ್ರದೇಶವು ಹಾಗು ಉಪಕೇಂದ್ರ ಸ್ಥಾಪಿಸಲು ಉದ್ದೇಶಿಸಿರುವ ಪ್ರದೇಶವು ಮೀಸಲು ಅರಣ್ಯದ ಒಳಗಡೆ ಬರುತ್ತಿದ್ದು, ರಾಷ್ಟ್ರೀಯ ಹೆದ್ದಾರಿ ಮಾಣಿ-ಮೈಸೂರು ರಸ್ತೆಯಿಂದ ಸುಮಾರು 700 ರಿಂದ 800 ಮೀಟರನಷ್ಟು ಒಳಗಡೆ ಇರುತ್ತದೆ. ಆದ್ದರಿಂದ ವಿದ್ಯುತ್ ಜಾಲಕ್ಕಾಗಿ ಹೆಚ್ಚಿನ ಅರಣ್ಯ |

| | | |
|---|---|---|
| | | ಪ್ರದೇಶ ಮತ್ತು ಮರಗಳನ್ನು ಕಡಿಯುವ ಅವಶ್ಯಕತೆ ಕಂಡುಬಂದಿರುತ್ತದೆ. ಅಲ್ಲದೆ ಸದರಿ ವಿಷಯವನ್ನು ಸೂಕ್ತ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ ಕಾರ್ಯಗತಗೊಳಿಸಲು ಹೆಚ್ಚಿನ ಸಮಯ ತಗಲಬಹುದಾಗಿರುತ್ತದೆ. ಆದ್ದರಿಂದ ರಾಜಾರಾಂಪುರ ಪ್ರದೇಶದಿಂದ ವಿದ್ಯುತ್ ಜಾಲಗಳನ್ನು ಎಳೆಯಲು ಹೆಚ್ಚಿನ ಅನುಕೂಲವಿದ್ದು, ಸದರಿ ಪ್ರದೇಶವು ರಾಷ್ಟ್ರೀಯ ಹೆದ್ದಾರಿ ಮಾಣಿ-ಮೈಸೂರು ರಸ್ತೆಯ ಪಕ್ಕದಲ್ಲಿರುತ್ತದೆ. ಆದುದರಿಂದ ರಾಜಾರಾಂಪುರ ಪ್ರದೇಶದಲ್ಲಿ ಸಬ್ ಸ್ಟೇಷನ್ ನಿರ್ಮಿಸುವುದು ಸೂಕ್ತವೆಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಮಂಗಳೂರು ಇವರು ವರದಿ ಸಲ್ಲಿಸಿರುತ್ತಾರೆಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮಂಗಳೂರು ವೃತ್ತ ಇವರು ವರದಿಯನ್ನು **(**ಪ್ರತಿ ಲಗತ್ತಿಸಿದೆ**)** ಒಪ್ಪಬಹುದಾಗಿದೆ. |

ಆದ್ದರಿಂದ, ಈ ಮೇಲ್ಕಂಡ ಅಂಶಗಳನ್ನು ಪರಿಗಣಿಸಿ ಸದರಿ ಪ್ರಸ್ತಾವನೆಗೆ ಅರಣ್ಯ **(**ಸಂರಕ್ಷಣೆ**)** ಕಾಯ್ದೆ **1980** ರಡಿಯಲ್ಲಿ ತಾತ್ವಿಕ ಅನುಮೋದನೆ ನೀಡಲು ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ಎಫ್ ಸಿ ಪೋ ರ್ಟ್ ಲ್ ನಲ್ಲಿ ಪ್ರಸ್ತಾವನೆ ಯ ಇತ್ತೀಚಿನ ಹಂತ **(Timeline)** ವನ್ನು ಈ ಪತ್ರದ ಜೊತೆಗೆ ಲಗತ್ತಿಸಿದೆ

ತಮ್ಮ ವಿಶ್ವಾಸಿ

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ

(ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿ (ಅ.ಸಂ.ಕಾ)

ಪ್ರತಿಯನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ವೃತ್ತ, ಮಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

ಪ್ರತಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ವಿಭಾಗ, ಮಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

ಪ್ರತಿಯನ್ನು ಕಾರ್ಯ ನಿರ್ವಹಕ ಅಭಿಯಂತರರು (ವಿದ್ಯುತ್), ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ (ಮೆಸ್ಕಾಂ), ಪುತ್ತೂರು ವಿಭಾಗ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.